ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

**ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ 57) ನಮೂನೆ ಸಂಖ್ಯೆ 4 (ಸಿವಿಲ್)**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ
ಇವರ ನ್ಯಾಯಾಲಯದಲ್ಲಿ

<u>ಸಿ.ಸಿ.ನಂಬರ್ **2698-2020**</u>

ಪಿ.ಡಬ್ಲು-1.
ಸಿ.ಡಬ್ಲು-2.

ಹೆಸರು : ಲೋಕೇಶ್
ತಂದೆಯ ಹೆಸರು : ನಾರಾಯಣ ಸ್ವಾಮಿ
ವಯಸ್ಸು : 43
ಉದ್ಯೋಗ : ಖಾಸಗಿ
ವಾಸ ಸ್ಥಳ : ಸೂಲಿಬೆಲೆ

ದಿ: 08.07.2026 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ಚಾ.ಸಾ.1, 3 ಮತ್ತು ಆರೋಪಿಯ ಪರಿಚಯವಿಲ್ಲ. ಮೃತ ಜೀತೆಂದ್ರ ಕುಮಾರ್ ರವರ ಪರಿಚಯವಿಲ್ಲ.

ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ನನಗೆ ಪ್ರಸ್ತುತ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಕಾಣುತ್ತಿರುವ ವ್ಯಕ್ತಿಯನ್ನು ಈ ಹಿಂದೆ ನೋಡಿರುವುದ್ದಿ.

**(** ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.**)**

<u>ಪಾಟೀ ಸವಾಲು</u>: ಸಹಾಯಕ ಸರ್ಕಾರಿ ಅಭಿಯೋಜಕರಿಂದ .

ದಿ:28.03.2020 ರಂದು ಬೆಳಿಗ್ಗೆ 10.50 ಗಂಟೆ ಸಮಯದಲ್ಲಿ ನಾನು ಕೆಲಸ ಮುಗಿಸಿಕೊಂಡು ವಾಪಸ್ಸು ಊರಿನ ಕಡೆಗೆ ಹೋಗುವ ಸಲುವಾಗಿ ನನ್ನ ಬಾಬ್ತು ಮೋಟರ್ ಸೈಕಲ್ ನಲ್ಲಿ ಚಿಂತಾಮಣಿ-ಹೊಸಕೋಟೆ ರಸ್ತೆಯಲ್ಲಿ ಬರುತ್ತಿದ್ದಾಗ ಚೊಕ್ಕಹಳ್ಳಿಯ ಸಂತೆ ಮೈದಾನದ ಮುಂಭಾಗದ ರಸ್ತೆಯಲ್ಲಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ತನ್ನ ಬಾಬ್ತು ಕ್ಯಾಂಟರ್ ವಾಹನ ನೊಂದಣಿ ಸಂಖ್ಯೆ ಕೆಎ-05-ಎಇ-6601 ನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಲಾಯಿಸಿಕೊಂಡು ಬಂದು ಹೊಸಕೋಟೆ- ಚಿಂತಾಮಣಿ ರಸ್ತೆಯನ್ನು ದಾಟುತ್ತಿದ್ದ ವ್ಯಕ್ತಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದ ಎಂದರೆ ಸರಿಯಲ್ಲ. ತದನಂತರ ನಾನು ಹತ್ತಿರ ಹೋಗಿ ನೋಡಲಾಗಿ ಅಪಘಾತಕ್ಕೆ ಒಳಗಾಗಿದ್ದ ವ್ಯಕ್ತಿಯ ಮೈಕೈಗೆ ಗಾಯವಾಗಿ ಸ್ಥಳ ದಲ್ಲಿಯೇ ಮೃತ ಪಟ್ಟಿದ ಎಂದರೆ ಸರಿಯಲ್ಲ. ತದನಂತರ ಸದರಿ ರಸ್ತೆಯಲ್ಲಿ ಸೇರಿದ ಇತರ ಜನರು ಮೃತ ಪಟ್ಟ ವ್ಯಕ್ತಿಯ ಜೇಬಿನಲ್ಲಿ ಆಧಾರ್ ಕಾರ್ಡ್ ನ್ನು ತೆಗೆದು ನೋಡಲಾಗಿ ಸದರಿ ವ್ಯಕ್ತಿ ಹೆಸರು ಜಿತೇಂದ್ರ ಕುಮಾರ್ ಯಾದವ್ ಎಂದು ತಿಳಿದುಬಂದಿತ್ತು ಎಂದರೆ ಸರಿಯಲ್ಲ. ತದನಂತರ ಮೃತ ದೇಹವನ್ನು ತುರ್ತು ವಾಹಾನದಲ್ಲಿ ಹೊಸಕೋಟೆಗೆ ತೆಗೆದುಕೊಂಡು ಹೋಗಲಾಗಿತ್ತು ಎಂದರೆ ಸರಿಯಲ್ಲ. ಈ ಮೇಲಿನಂತೆ ದಿಃ 03.05.2020 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.1 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು**:** ಆರೋಪಿ ಪರ ಶ್ರೀಮತಿ ಜೆ. ಎಂ.ಪಿ.,ವಕೀಲರಿಂದ**:** ಏನು ಇಲ್ಲ

<u>ಮರುವಿಚಾರಣೆ**:-**ಇಲ್ಲ**-**</u>
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.